ಅಪ್ಪಳಿಸುತ್ತಿರುವಂತೆ, ಅವು ಅದರ ತಳಗೋಡೆಯನ್ನು ನೊರೆಯೊಂದಿಗೆ ನೆಕ್ಕತೊಡಗಿದವು. ದೂರದಲ್ಲಿ ಬಿರುಗಾಳಿ ಗರ್ಜಿಸತೊಡಗಿತು. ವಿಚಲಿತಗೊಂಡ ಆ ಕಪ್ಪು ಅನಂತದಲ್ಲಿ ಹಡಗುಗಳ ನಡುಗಂಬಗಳಿಂದ ಹಸಿರು ಕಂದೀಲುಗಳು ಚಕಚಕನೆ ಹೊಳೆಯತೊಡಗಿದವು. ಈ ಹಸಿರು ಬಿಂದುಗಳು ಒಮ್ಮೆ ಮೇಲಿದ್ದು ನಂತರ ಕೆಳಗೆ ಮುಳುಗಿ ಹೋದವು. ಇದೀಗ, ಅವು ಬಲಬದಿಗೊಮ್ಮೆ ಎಡಬದಿಗೊಮ್ಮೆ ಉಯ್ಯಾಲೆಯಾಡುವಂತೆ ತೋರಿದವು. ಸ್ಕಾವಿನ್‌ಸ್ಕಿ ಕೆಳಗಿಳಿದು ತನ್ನ ಕೋಣೆಗೆ ಹೋದ. ಬಿರುಗಾಳಿ ಬೊಬ್ಬೆ ಹಾಕಲಾರಂಭಿಸಿತು. ಆ ಹಡಗುಗಳಲ್ಲಿದ್ದ ಜನರು, ಹೊರಗಿನ ರಾತ್ರಿಯೊಂದಿಗೆ, ಕತ್ತಲೆಯೊಂದಿಗೆ, ಅಲೆಗಳೊಂದಿಗೆ ಗುದ್ದಾಡತೊಡಗಿದ್ದರು. ಆದರೆ, ದೀಪಗೃಹದ ಗೋಪುರದೊಳಗೆ ಶಾಂತಿ ಹಾಗೂ ಮೌನ ತುಂಬಿಕೊಂಡಿತ್ತು. ಅದರ ದಪ್ಪವಾದ ಗೋಡೆಗಳ ಮೂಲಕ ಬಿರುಗಾಳಿಯ ಸದ್ದು ಕೂಡ ಕೇಳಿ ಬರುತ್ತಿರಲಿಲ್ಲ. ಕೇವಲ ಕಾಲದ ಲೆಕ್ಕ ವಿಡುವಂಥ ಗಡಿಯಾರದ ಟಿಕ್‌ಟ್ಯಾಕ್ ಎಂಬ ಲಾಲಿಯ ಹಾಡು ಆ ವೃದ್ಧನನ್ನು ನಿದ್ದೆಗೆ ತಳ್ಳಿತು.

## ಅಧ್ಯಾಯ–2

ಗಂಟೆಗಳು, ದಿನಗಳು, ವಾರಗಳು ಕಳೆದುಹೋಗತೊಡಗಿದವು. ಸಮುದ್ರವು ಕೆರಳಿ ದೊಡ್ಡ ದನಿಯಲ್ಲಿ ಅಬ್ಬರಿಸುತ್ತಿರುವಾಗ, ರಾತ್ರಿ ಹಾಗೂ ಕತ್ತಲೆಯ ಗರ್ಭದೊಳಗಿಂದ ಏನೋ ಒಂದು ಅವರ ಹೆಸರು ಹಿಡಿದು ಕರೆದಂತಾಗುತ್ತದೆ. ಬಹುಶಃ ಮನುಷ್ಯ ಮುದುಕನಾಗುತ್ತ ಹೋದಂತೆ, ಸಮುದ್ರದ ಅನಂತತೆಯಿಂದ ಹಾಗೆ ಕರೆ ಬರುವುದಾದರೆ, ಇದಕ್ಕಿಂತಲೂ ಗಾಢವಾದ ಹಾಗೂ ನಿಗೂಢವಾದ ಇನ್ನೊಂದು ಅನಂತತೆಯಿಂದ ಅವನಿಗೂ ಅಂಥ ಕರೆಗಳು ಬಂದೇ ಬರುತ್ತವೆ. ಜೀವನದಿಂದ ಹೆಚ್ಚು ಹೆಚ್ಚು ಆತ ಜಿಗುಪ್ಸೆಗೊಂಡಂತೆ ಅಂಥ ಕರೆಗಳು ಆತನಿಗೆ ಹೆಚ್ಚು ಹೆಚ್ಚು ಪ್ರಿಯವಾಗುತ್ತವೆ. ಆದರೆ, ಅಂಥ ಕರೆಗಳನ್ನು ಆಲಿಸಲು ಪ್ರಶಾಂತತೆ ಬೇಕಾಗುತ್ತದೆ. ಅಲ್ಲದೆ, ವೃದ್ಧಾಪ್ಯವು ಸಾವಿನ ಮುನ್ಸೂಚನೆಯಿಂದ ತನ್ನನ್ನು ತಾನು ದೂರವಿರಿಸಿಕೊಳ್ಳಲು ಬಯಸುತ್ತದೆ. ಸ್ಕಾವಿನ್‌ಸ್ಕಿಗೆ ಆ ದೀಪಗೃಹವು ಅಂಥ ಒಂದು ಅರ್ಧ ಸ್ಮಶಾನವಾಗಿ ರೂಪಗೊಂಡಿತ್ತು. ಆ ದೀಪಗೋಪುರದ ಮೇಲಿದ್ದ ಚಿಟ್ಟು ಹಿಡಿಸುವ ಏಕತಾನತೆ ಬೇರೆಲ್ಲೂ ಕಾಣಸಿಗಲಾರದು. ಒಂದು ವೇಳೆ ಯುವಕರು ಈ ಸಂಚಾಲಕ ಸೇವೆಗೆ ಸೇರಿಕೊಂಡರೆ, ಕೆಲ ಸಮಯದ ನಂತರ ಅದನ್ನು ಬಿಟ್ಟು ಹೋಗುವುದಂತೂ ನಿಶ್ಚಿತ. ದೀಪಗೃಹದ ಸಂಚಾಲಕರು ಬಹುತೇಕ ಮಧ್ಯವಯಸ್ಕರು, ಖಿನ್ನವದನರು ಹಾಗೂ ತಮ್ಮಷ್ಟಕ್ಕೆ ತಾವೇ ಇದ್ದುಬಿಡುವ ಸ್ವಭಾವದವರಾಗಿರುತ್ತಾರೆ. ಅಂಥವರಲ್ಲಿ ಯಾವನಾದರೂ ಒಬ್ಬ ತನ್ನ ದೀಪಗೃಹದ ಸಂಚಾಲಕ ಸೇವೆಯಿಂದ ಹೊರಬಂದು ಜನರೊಂದಿಗೆ ಬೆರೆತರೆ, ಆತ ಕುಂಭಕರ್ಣನ ನಿದ್ದೆಯಿಂದ ಎದ್ದು ಬಂದವರಂತೆ ಜೋಲುತ್ತ ನಡೆದಾಡುತ್ತಾನೆ. ಸಾಮಾನ್ಯ ಸಹಜ ಬದುಕಿನಲ್ಲಿ ಕಲಿತು ಎಲ್ಲದಕ್ಕೂ ಹೊಂದಿಕೊಳ್ಳುವಂಥ ಸೂಕ್ಷ್ಮ ಸಂಗತಿಗಳೇನೂ ದೀಪಗೃಹದ ಬದುಕಿನಿಂದ ಸಿಗಲಾರವು. ದೀಪಗೃಹದ ಓರ್ವ ಸಂಚಾಲಕನಿಗೆ ಸಂಪರ್ಕಕ್ಕೆ ಬರುವುದೇನಿದ್ದರೂ ದೈತ್ಯಗಾತ್ರದ ಹಾಗೂ ನಿಶ್ಚಿತ ಆಕಾರವಿಲ್ಲದ ಆಕೃತಿಗಳು ಮಾತ್ರ. ಒಂದೆಡೆ ಅಖಂಡ ಆಕಾಶ, ಇನ್ನೊಂದೆಡೆ ಅಖಂಡ ಜಲರಾಶಿ ಈ ಎರಡು ಅನಂತಗಳ ನಡುವೆ ಮನುಷ್ಯನ ಆತ್ಮ ಏಕಾಂಗಿಯಾಗಿದೆ. ಅದೊಂದು ರೀತಿಯ ವಿಚಿತ್ರ ಬದುಕು. ಅಲ್ಲಿ ಯೋಚನೆ ಎನ್ನುವುದೆಲ್ಲಾ ನಿರಂತರ ಧ್ಯಾನ. ಅಲ್ಲದೆ, ಆ ಧ್ಯಾನದ ಶೂನ್ಯ ಸ್ಥಿತಿಯಿಂದ ಯಾವುದು ಕೂಡ ಸಂಚಾಲಕನನ್ನು ಉತ್ತೇಜಿಸಲಾರದು, ಅಷ್ಟೇ ಏಕೆ ಆತನ ಕೆಲಸವನ್ನು ಕೂಡ! ಹವಾಮಾನ ಒಂದಿಷ್ಟು ಬದಲಾಗದಿದ್ದರೆ, ಜಪಮಾಲೆಯ ಎರಡು ಮಣಿಗಳಂತೆ ಹಗಲು ಕೂಡ